ರಂಜಾನ್ ತಿಂಗಳ ಹದಿನಾಲ್ಕನೇ ಉಪವಾಸದಂದು, ಮಧ್ಯಾಹ್ನ ಎರಡೂವರೆ ಗಂಟೆಗೆ, ಜೀನತ್ ಹಜಾರದಲ್ಲಿದ್ದ ದಿವಾನ್‌ಕಾಟ್ ಮೇಲೆ ಬಿದ್ದುಕೊಂಡು ನಿದ್ರೆಯನ್ನು ಆಹ್ವಾನಿಸುವ ಸಕಲ ಕಲೆಗಳನ್ನು ಪ್ರಯೋಗಿಸುತ್ತಿದ್ದಳು. ಆದರೆ, ಕಿತ್ತು ತಿನ್ನುವ ಹಸಿವಿನ ಅಪಾರ ಕ್ರೌರ್ಯದೆದುರು ಆಕೆಯ ಕ್ಷಮತೆ ಮತ್ತು ಧಾರ್ಮಿಕತೆ ಕುಸಿದು ಬಿದ್ದಿದ್ದವು. ಸಾಕಷ್ಟು ಉಳ್ಳವರ ಮನೆಯ ಆಕೆ, ಹೊತ್ತು ಹೊತ್ತಿಗೆ ರುಚಿಕಟ್ಟಾಗಿ ಅಡಿಗೆ ಮಾಡಿ ತನ್ನ ಮನೆಯವರಿಗೆ ಇಕ್ಕಿ ತಾನೂ ಕೂಡಾ ತಿಂದು – ತೇಗಿ ನಿರ್ಯೋಚನೆಯಿಂದ ಇದ್ದವಳು. ಈ ರಂಜಾನಿನ ಉಪವಾಸಗಳು ಅಂತ ಇಲ್ಲದೇ ಇದ್ದಲ್ಲಿ ಅವಳಿಗೆ ಹಸಿವಿನ ಸಂಕಟದ ಪರಿಚಯವೇ ಆಗುತ್ತಿರಲಿಲ್ಲ. ಕಳೆದ ನಾಲ್ಕೈದು ವರ್ಷಗಳಿಂದ ಸಕ್ಕರೆಕಾಯಿಲೆ ಎಂಬ ಮನಮೋಹಕ ಹೆಸರಿನ ರೋಗವೊಂದು ಅವಳಿಗೆ ಅಂಟಿದ್ದು, ವೈದ್ಯರು ಆಕೆ ಸಮಯಕ್ಕೆ ಸರಿಯಾಗಿ ಊಟ, ಮತ್ತು ಗುಳಿಗೆಗಳನ್ನು ತಿಂದು ಪಥ್ಯ ಹಾಗೂ ನಡಿಗೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಆದೇಶಿಸಿದ್ದರು. ಉಳಿದ ಸಮಯದಲ್ಲಿ ಆಕೆ ಅತ್ಯಂತ ನಿಷ್ಠೆಯಿಂದ ಈ ಸಲಹೆಗಳನ್ನು ಪಾಲಿಸುತ್ತಿದ್ದು, ರಂಜಾನಿನಲ್ಲಿ ಅವಳ ವೇಳಾಪಟ್ಟಿಯು ಎರ್ರಾಬಿರ್ರಿ ತಲೆಕೆಳಗಾಗಿತ್ತು.

ಉಪವಾಸದ ಪ್ರಯುಕ್ತ 'ಸೆಹರಿ' ಊಟದ ಸಲುವಾಗಿ ಆಕೆ ಬೆಳಗಿನ ಜಾವ ನಾಲ್ಕೂವರೆಗೆ ಎದ್ದಿರಬೇಕಿತ್ತು. ಆದರೆ ಅವಳು ಇನ್ನಷ್ಟು ಕರ್ಮಠಳಾಗಿ ಬೆಳಗಿನ ಜಾವ ಮೂರುವರೆಗೆ ಸನ್ನದ್ಧಳಾಗಿ ಮಧ್ಯರಾತ್ರಿಯ ವಿಶೇಷ ನಮಾಜ್ 'ತಹಜ್ಜುದ್' ನೆರವೇರಿಸುತ್ತಿದ್ದಳು. ಸೆಹರಿ ಊಟ ಮುಗಿಸಿ, ಬೆಳಗಿನ ಜಾವದ ನಮಾಜ್‌ನ ನಂತರ ಇಡೀಮನೆ ಮಂದಿಯೆಲ್ಲಾ ಮಲಗಿದರೂ, ಆಕೆ ಅಲ್ಲಾಹನ ತೊಂಬತ್ತೊಂಬತ್ತು ಹೆಸರುಗಳನ್ನು ಜಪಮಣಿ ಎಣಿಸುವ 'ತಸ್‌ಬೀಹ್'ನಲ್ಲಿ ಪಠಿಸಿ ಕುರಾನ್‌ನ ಒಂದೆರಡು ಅಧ್ಯಾಯಗಳನ್ನು ಪಠಿಸುವಷ್ಟರಲ್ಲಿ ಮನೆಯಲ್ಲಿ ಬೆಳಗಿನ ಚಟುವಟಿಕೆ ಆರಂಭವಾಗುತ್ತಿತ್ತು. ಹಾಗೆ ನೋಡಿದರೆ ಮನೆ ಮನೆಮಂದಿಯಲ್ಲಾ ಉಪವಾಸವಿದ್ದವರೇ. ಹೀಗಾಗಿ, ಬೆಳಗಿನ ತಿಂಡಿಯನ್ನು ಸಿದ್ಧ ಮಾಡುವ ಅಗತ್ಯವಿರಲಿಲ್ಲ. ಆದರೆ, ಹಿರಿಮಗ ಅನೀಸ್‌ನ ಇಬ್ಬರು ಗಂಡು ಮಕ್ಕಳು ಮತ್ತು ಕಿರಿಮಗ ಸಾದಿಕ್‌ನ ಮಗಳನ್ನು ಶಾಲೆಗೆ ಕಳಿಸಬೇಕಿತ್ತು. ಮನೆಯ ಗಂಡಸರು ಉದ್ಯೋಗದ ಸಲುವಾಗಿ ಹೋಗಬೇಕಿತ್ತು. ಹೀಗಾಗಿ ಮಧ್ಯಾಹ್ನದ ನಮಾಜ್‌ನ ನಂತರದ ಹೊತ್ತು ಅವಳ ನಿದ್ರೆಗೆ ಪ್ರಶಸ್ತ ಕಾಲವಾಗಿತ್ತು.

ವರ್ಷವಿಡೀ ಮಧ್ಯಾಹ್ನದ ಊಟಕ್ಕೆ ಬಗ್ಗಿ ಹೋಗಿದ್ದ ಕರುಳುಗಳು 'ಗುಳಕ್' ಎಂದು ಸದ್ದು ಮಾಡಿ ಹೊರಳುತ್ತಿದ್ದವು. ಕೈಕಾಲಲ್ಲಿ ಶಕ್ತಿ ಉಡುಗಿದಂತಾಗಿ ಆಯಾಸದಿಂದ ಸೋತು ನಿದ್ರೆಯ ಆಸರೆಗೆ ಜಾರಿದ್ದಳು. ನಿದ್ರೆಯಲ್ಲಂತೂ, ಅವಳು ಚಿಕ್ಕಬಾಲಕಿಯಂತೆ ಕಂಡು ಬಂದಳು. ಅಂಗಳದಲ್ಲಿದ್ದ ಸೀಬೆ ಮರದ ಕೈಗೆಟುಕಿದ ಕೊಂಬೆಯಲ್ಲಿ ಆಕೆಯ ತಾಯಿ ಆಕೆಯನ್ನು ಕೂರಿಸಿ ಕೈ ತುತ್ತು ಮಾಡಿ ಆಕೆಯ ಬಾಯಿಗಿಟ್ಟಂತೆ... ಅವಳು 'ಆ...' ಎಂದು ಬಾಯಿ ತೆರೆಯುವಷ್ಟರಲ್ಲಿಯೇ ಫಕ್ಕನೆ ಎಚ್ಚರ! ನಂತರ ಊಟ–ಉಪಚಾರದ ಇನ್ನೊಂದು ಕನಸು; ಹೀಗೆಯೇ... ಚಿತ್ರ ವಿಚಿತ್ರವಾದ ಕನಸು. ಆ ಕನಸುಗಳ ಕಣಿವೆಯಲ್ಲಿ ಆಕೆ ಜಾರಿ ಹೋಗುತ್ತಿದ್ದಂತೆಯೇ... ಅಲ್ಲೆಲ್ಲೋ ಅವಳು ಹಾದು ಹೋಗುತ್ತಿದ್ದಾಳೆ. ವಿಚಿತ್ರವಾದ ದಟ್ಟವಾದ ಕಾಡು. ಯಾರೋ ಜೊತೆಗಿದ್ದಾರೆ. ಮೋರೆ ಮಾತ್ರ ಅಸ್ಪಷ್ಟ. ನಡೆದೂ ನಡೆದೂ ಸುಸ್ತಾಗಿ ವಿಪರೀತ ಬಾಯಾರಿಕೆಯೆಂದೆನಿಸಿದಾಗ ಜೊತೆಯಲ್ಲಿದ್ದವರು ಹೇಳಿದಂತೆ,

"ಜೀನತ್... ನಿನ್ನ ಪಕ್ಕದಲ್ಲಿ ಗಿಡ ಇದೆಯಲ್ಲಾ... ಅದರ ಹಳದಿ ಬಣ್ಣದ ಹೂವನ್ನು ಕಿತ್ತು ಒಂದು ಸಾರಿ ಮೂಸಿ ನೋಡು; ನಿನ್ನ ಬಾಯಾರಿಕೆ ಹೋಗುತ್ತೆ..." ಅಂತೆಯೇ... ಜೀನತ್ ಆ ಹೂವನ್ನು ಕಿತ್ತು ಮೂಸಿದಳು. ಒಮ್ಮೆಲೇ ಹೊಟ್ಟೆ ತೊಳಸಿದಂತಾಗಿ, ಅತ್ಯಂತ ಕೆಟ್ಟ ದುರ್ನಾತದಿಂದ ವಾಕರಿಕೆ ಬಂದು ಅವಳು ಫಕ್ಕನೆ ಕಣ್ಣು ಬಿಟ್ಟಳು.